ಫೋ.ನಂ.:(ಕ):0836-2215265

# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## ದೈಹಿಕ ಶಿಕ್ಷಣ ಹಾಗೂ ಕ್ರೀಡಾ ವಿಭಾಗ

‘A’ Grade
NAAC, Accredited 2022

Azadi Ka Amrit Mahotsav

**ಡಾ.ಬಿ.ಎಮ್.ಪಾಟೀಲ**
ನಿರ್ದೇಶಕರು
ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗ

ಕ್ರೀಡಾ ಭವನ,
ಧಾರವಾಡ-580 003 (ಕರ್ನಾಟಕ)
ಇ-ಮೇಲ್-kud.sports1@gmail.com

ಉಲ್ಲೇಖ : ಕವಿವಿ/ದೈ.ಶಿ.ವಿ./ 2022-23/249 ದಿನಾಂಕ: -23.11.2022

## ಸುತ್ತೋಲೆ

ವಿಷಯ:- ಕ. ವಿ. ವಿ. ಕೆಲವೊಂದು ಕ್ರೀಡೆಗಳ ಪಂದ್ಯಾವಳಿ/ಸ್ಪರ್ಧೆಯ ಹಾಗೂ ಆಯ್ಕೆಯ ದಿನಾಂಕದಲ್ಲಿ ಬದಲಾವಣೆಯ ಮತ್ತು ವಿಶ್ವವಿದ್ಯಾಲಯದ ಕಬಡ್ಡಿ ಮ್ಯಾಟ ಶೂಸ್ ಕುರಿತು.

ಈ ಮೂಲಕ ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲಾ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ, ಆಡಳಿತಾಧಿಕಾರಿಗಳಿಗೆ, ಸಂಯೋಜಕರಿಗೆ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರಿಗೆ ತಿಳಿಸುವುದೇನೆಂದರೆ ಸಂಘಟನಾ ಮಹಾವಿದ್ಯಾಲಯಗಳ ಪ್ರಾಚಾರ್ಯರ ಕೋರಿಕೆಯ ಮೇರೆಗೆ ಕೆಲವೊಂದು ಕ್ರೀಡೆಗಳ/ಸ್ಪರ್ಧೆ/ಪಂದ್ಯಾವಳಿ ಹಾಗೂ ಆಯ್ಕೆಯ ದಿನಾಂಕದಲ್ಲಿ ಬದಲಾವಣೆಯನ್ನು ಮಾಡಲಾಗಿದೆ.

ವಿವರ ಈ ಕೆಳಗಿನಂತಿದೆ.

| ಅ.ನಂ | ಕ್ರೀಡೆಯ ಹೆಸರು | ಪಂದ್ಯಾವಳಿ/ಸ್ಪರ್ಧೆಯ ದಿನಾಂಕ | ಆಯ್ಕೆಯ ದಿನಾಂಕ | ಆಯ್ಕೆಯ ಸ್ಥಳ |
|---|---|---|---|---|
| 01 | ಚದುರಂಗ (ಪು & ಮ) | 27 ಮತ್ತು 28 ನವೆಂಬರ್ 2022 | 28, 29 ಮತ್ತು 30 ನವೆಂಬರ್ 2022 | ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ, ಹೊನ್ನಾವರ |
| 02 | ಯೋಗಾಸನ (ಪು & ಮ) | 06 ಮತ್ತು 07 ಡಿಸೆಂಬರ್ 2022 | 07 ಮತ್ತು 08 ಡಿಸೆಂಬರ್ 2022 | ಎಸ್. ಕೆ. ಕಲಾ, ವಾಣಿಜ್ಯ & ಎಚ್. ಎಸ್. ಕೆ, ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ |
| 03 | ಖೋ-ಖೋ(ಮ) | 07 ಮತ್ತು 08 ಜನೇವರಿ 2023 | 08 ಮತ್ತು 09 ಜನೇವರಿ 2023 | ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ, ಶಿಗ್ಗಾಂವ |

**ಕಳೆದ ನಾಲ್ಕು ವರ್ಷಗಳಿಂದ ಎ.ಐ.ಯು (AIU) ನಿಯಮಾವಳಿಗಳ ಪ್ರಕಾರ ಅಂತರ ವಿಶ್ವವಿದ್ಯಾಲಯದ ಕಬಡ್ಡಿ ಪಂದ್ಯಾವಳಿಗಳನ್ನು ಮ್ಯಾಟ ಮೇಲೆಯೇ ಆಯೋಜಿಸಲಾಗುತ್ತಿದ್ದು, ಈ ವರ್ಷ ನಮ್ಮ ವಿಶ್ವವಿದ್ಯಾಲಯದ ಕಬಡ್ಡಿ ಪುರುಷ ಹಾಗೂ ಮಹಿಳಾ ತಂಡಗಳ ಆಯ್ಕೆಯನ್ನು ಮ್ಯಾಟ್ ಮೇಲೆಯೇ ಆಯ್ಕೆ ಮಾಡಲಾಗುತ್ತದೆ. ಕ್ರೀಡಾಪಟುಗಳನ್ನು ಮ್ಯಾಟ್ ಶೂಸ್ ಹಾಗೂ ಸಂಬಂದಿಸಿದ ಕ್ರೀಡಾದಿರಸುಗಳೊಂದಿಗೆ ವಿಶ್ವವಿದ್ಯಾಲಯ ಕಬಡ್ಡಿ ಕ್ರೀಡಾ ತಂಡದ ಆಯ್ಕೆಗೆ ಕಳುಹಿಸಲು ಕೋರಲಾಗಿದೆ. ಮ್ಯಾಟ್ ಶೂಸ್ ಹಾಗೂ ಯುನಿಫಾರ್ಮ ಧರಿಸದ ಆಟಗಾರರನ್ನು ಆಯ್ಕೆಗೆ ಪರಿಗಣಿಸಲಾಗುವದಿಲ್ಲ.**

ಆಯ್ಕೆಗೆ ಬರುವ ಕ್ರೀಡಾಪಟುಗಳು ಮಹಾವಿದ್ಯಾಲಯ ಗುರುತಿನ ಚೀಟಿ (I.D.), ಅರ್ಹತಾ ಪ್ರಮಾಣ ಪತ್ರ (Eligibilty Form) ಮಹಾವಿದ್ಯಾಲಯದ ಪ್ರಾಚಾರ್ಯರು ದೃಢಿಕರಿಸಿದ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ಅಂಕಪಟ್ಟಿ ಹಾಗೂ ಕೋವಿಡ್ ಲಸಿಕೆ ಹಾಕಿಸಿಕೊಂಡ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು ಮತ್ತು ಕೋವಿಡ ನಿಯಮವನ್ನು ಪಾಲಿಸುವುದು. ಸದರಿ ವಿಷಯವನ್ನು ತಮ್ಮ ಮಹಾವಿದ್ಯಾಲಯದಿಂದ ಆಯ್ಕೆಗೆ ಬರುವ ಕ್ರೀಡಾಪಟುಗಳ ಗಮನಕ್ಕೆ ತರಲು ಕೋರಲಾಗಿದೆ.

Sd-
ನಿರ್ದೇಶಕರು,
ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗ

ಪ್ರತಿ:

1. ಕುಲಪತಿಗಳ ಆಪ್ತ ಕಾರ್ಯದರ್ಶಿ, ಕ. ವಿ. ವಿ. ಧಾರವಾಡ
2. ಕುಲಸಚಿವರ ಆಪ್ತ ಕಾರ್ಯಾಲಯ , ಕ. ವಿ. ವಿ. ಧಾರವಾಡ
3. ವಿತ್ತಾಧಿಕಾರಿಗಳು, ಕ. ವಿ. ವಿ. ಧಾರವಾಡ
4. ಅಧ್ಯಕ್ಷರು, ಸ್ನಾತಕೋತ್ತರ ವಿದ್ಯಾರ್ಥಿ ಕೂಟ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5. ಆಡಳಿತಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಕಾರವಾರ, ಹಾವೇರಿ ಮತ್ತು ಗದಗ.
6. ಪ್ರಾಚಾರ್ಯರು, ಕ. ವಿ. ವಿ. ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳು.
7. [illegible]